ಶ್ರೀ ಸುತ್ತೂರು ಮಠ

ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 237

**19 ಡಿಸೆಂಬರ್ 2021 * ಭಾನುವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

## ಕೊಳಲು ವಾದನ



ವಿದ್ವಾನ್ ವಿ. ವಂಶೀಧರ್



ವಿದ್ವಾನ್ ಮೈಸೂರು ಎನ್. ಕಾರ್ತಿಕ್
ವಯೊಲಿನ್



ವಿದ್ವಾನ್ ಎಚ್.ಎಲ್. ಶಿವಶಂಕರಸ್ವಾಮಿ
ಮೃದಂಗ

**ಸರ್ವರಿಗೂ ಹಾರ್ದಿಕ ಸ್ವಾಗತ**

ನೇರವಾಗಿ ಭಾಗವಹಿಸುವವರು ಕೋವಿಡ್ 19ರ ಸೂಚನೆಗಳನ್ನು ಪಾಲಿಸಬೇಕು

ಆನ್‌ಲೈನ್ ಮೂಲಕವೂ ವೀಕ್ಷಿಸಬಹುದು

YouTube http://Youtube.com/c/JSSMahavidyapeethaonline

f LIVE https://www.facebook.com/JSSMVP

LIVE STREAMING

**ವಿದ್ವಾನ್ ವಿ. ವಂಶೀಧರ್‌ರವರು** ಕರ್ನಾಟಕದ ಮುಂಚೂಣಿಯ ಉದಯೋನ್ಮುಖ ವೇಣುವಾದನ ಕಲಾವಿದರು. ಸಂಗೀತದ ಕೌಟುಂಬಿಕ ಹಿನ್ನೆಲೆಯಲ್ಲಿ ಅರಳಿದ ಪ್ರತಿಭಾಶಾಲಿಗಳು. ಮೂರನೆಯ ವರ್ಷಕ್ಕೇ ರಾಗಗಳ ಗುರುತಿಸುವಿಕೆ, ಏಳನೆಯ ವರ್ಷಕ್ಕೆ ಸಂಗೀತದ ಬಾಲಪಾಠ, ಹನ್ನೊಂದು ವರ್ಷಕ್ಕೆ ಮೊದಲನೆಯ ಸಾರ್ವಜನಿಕ ಕಾರ್ಯಕ್ರಮ ನೀಡಿದ ಅಪರೂಪದ ಸಾಧಕರು. ದೊಡ್ಡ ತಾತ ವೀಣಾ ಮಾಂತ್ರಿಕ ಪದ್ಮಭೂಷಣ ಡಾ. ವಿ. ದೊರೆಸ್ವಾಮಿ ಅಯ್ಯಂಗಾರ್‌ರವರು. ಇನ್ನೊಬ್ಬ ತಾತ ಖ್ಯಾತ ವೇಣುವಾದಕ ವಿದ್ವಾನ್ ವಿ. ದೇಶಿಕಾಚಾರ್‌ರವರು. ಚಿಕ್ಕಪ್ಪ ವೀಣಾವಾದನ ಪಟು ವಿದ್ವಾನ್ ಡಿ. ಬಾಲಕೃಷ್ಣರವರು. ಈ ಪರಂಪರೆಯಲ್ಲಿ ಅರಳಿದ ಇವರು ಅನಾಯಾಸವಾಗಿ ಸಾಧನೆಯಲ್ಲಿ ಮುಂದುವರಿದರು. ಉನ್ನತ ಸಂಗೀತದ ಸೂಕ್ಷ್ಮತೆಗಳನ್ನು ವಿದ್ವಾನ್ ಡಿ. ಬಾಲಕೃಷ್ಣರವರ ಬಳಿ ಅರಿತುಕೊಳ್ಳುತ್ತಿದ್ದಾರೆ. ಅವರೊಡನೆ ಹಲವಾರು ವೀಣಾ-ವೇಣು ಜುಗಲಬಂದಿ ಕಾರ್ಯಕ್ರಮಗಳನ್ನು ಪ್ರಸ್ತುತಿಪಡಿಸಿದ್ದಾರೆ.

ಪರಂಪರೆಯ ಶಾಸ್ತ್ರಶುದ್ಧಿ, ನಾದಸೌಖ್ಯದ ಮಾಧುರ್ಯ, ಭಕ್ತಿ ಇವರ ಸಂಗೀತದ ವೈಶಿಷ್ಟ್ಯ. ಪ್ರಸ್ತುತ ಆಕಾಶವಾಣಿ ಮತ್ತು ದೂರದರ್ಶನದ "ಎ" ಶ್ರೇಣಿ ಕಲಾವಿದರು. ಶ್ರೋತೃಗಳು ಮತ್ತು ವಿಮರ್ಶಕರಿಂದ ಏಕರೀತಿಯ ಪ್ರಶಂಸೆ ಪಡೆದಿರುವವರು. ಇವರಿಗೆ ಮದ್ರಾಸ್ ಮ್ಯೂಸಿಕ್ ಅಕಾಡೆಮಿಯಿಂದ ಬೆಸ್ಟ್ ಇನ್‌ಸ್ಟ್ರುಮೆಂಟಲಿಸ್ಟ್ ಅವಾರ್ಡ್, ಅನನ್ಯ ಯುವ ಪುರಸ್ಕಾರ, ಶ್ರೀ ಜಿ.ಟಿ.ನಾರಾಯಣರಾವ್ ಮೆಮೋರಿಯಲ್ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿ, ಪುರಸ್ಕಾರಗಳು ಲಭಿಸಿವೆ. ಎಂ.ಕಾಂ. ಪದವೀಧರರು. ಪ್ರಸ್ತುತ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

**ವಿದ್ವಾನ್ ಮೈಸೂರು ಎನ್. ಕಾರ್ತಿಕ್‌ರವರು** ರಾಷ್ಟ್ರದ ಉದಯೋನ್ಮುಖ ವಯೊಲಿನ್ ವಾದಕರಲ್ಲಿ ಅತ್ಯಂತ ಭರವಸೆಯ ಕಲಾವಿದರು. ತಾತ ವಿದ್ವಾನ್ ಎಸ್. ಮಹದೇವಪ್ಪನವರು ಮತ್ತು ತಂದೆ ವಿದ್ವಾನ್ ಮೈಸೂರು ಎಂ. ನಾಗರಾಜ್‌ರವರು ಇವರ ಗುರುಗಳು. ಸಂಗೀತ ಮನೆತನದ ಮತ್ತೊಬ್ಬ ಯುವ ಪ್ರತಿಭೆ. ಆಕಾಶವಾಣಿ ಮತ್ತು ದೂರದರ್ಶನದ "ಎ" ಶ್ರೇಣಿ ಕಲಾವಿದರು. ಕೇಂದ್ರ ಸರ್ಕಾರದಿಂದಲೂ ಪುರಸ್ಕೃತರು. ಪ್ರಶಾಂತಿ, ನಾದಸೌಖ್ಯ ಇವರ ನುಡಿಸುವಿಕೆಯ ವೈಶಿಷ್ಟ್ಯ. ಸೋಲೋ, ದ್ವಂದ್ವ, ಜುಗಲಬಂದಿ ಎಲ್ಲ ರೀತಿಯ ಕಚೇರಿಗಳಲ್ಲೂ ಸಿದ್ಧಹಸ್ತರು. ಚಿಕ್ಕ ವಯಸ್ಸಿಗೇ ವಿದೇಶಗಳಲ್ಲಿ ತಮ್ಮ ವಾದನ ಸಾದರ ಪಡಿಸಿದ ಅಪರೂಪದ ಸಾಧನೆ. ಅಂತಾರಾಷ್ಟ್ರೀಯ ಮಟ್ಟದ ಅನೇಕ ಸಿ.ಡಿ.ಗಳಲ್ಲಿ ವಯೊಲಿನ್ ನುಡಿಸಿ ಪ್ರಸಿದ್ದರಾಗಿದ್ದಾರೆ.

**ವಿದ್ವಾನ್ ಎಚ್.ಎಲ್. ಶಿವಶಂಕರಸ್ವಾಮಿಯವರು** ಸಂಗೀತ ಕ್ಷೇತ್ರದ ಖ್ಯಾತನಾಮರಿಗೆಲ್ಲ ಸಾಥ್ ನೀಡಿರುವ ಹಿರಿಮೆ ಹೊಂದಿದ್ದಾರೆ. ಜುಗಲ್‌ಬಂದಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಕರ್ನಾಟಕ ಗಾನಕಲಾ ಪರಿಷತ್ತಿನಿಂದ "ಉತ್ತಮ ಮೃದಂಗ ಕಲಾವಿದರು" ಎಂದು ಪುರಸ್ಕೃತರಾಗಿದ್ದಾರೆ. ಏಳು ಮೃದಂಗಗಳ ಮೂಲಕ ರಾಗ ಸಂಚಾರಗಳನ್ನು ತೋರಿಸಿರುವ ಇವರ ಕೌಶಲ ವಿದ್ವಾಂಸರ ಮೆಚ್ಚುಗೆಗೆ ಪಾತ್ರವಾಗಿದೆ. ಮೈಸೂರಿನ "ಲಯ ವಿದ್ಯಾ ಪ್ರತಿಷ್ಠಾನ" ಸಂಸ್ಥೆ ಇವರು ಲಯವಾದ್ಯಗಳಿಗಾಗಿಯೇ ಪ್ರಾರಂಭಿಸಿರುವ ಒಂದು ಕಲಾಕೇಂದ್ರ. ಇವರು ಪ್ರಸ್ತುತಪಡಿಸುವ "ಲಯ ಲಹರಿ" ಫ್ಯೂಷನ್ ಕಾರ್ಯಕ್ರಮ ತುಂಬ ಜನಪ್ರಿಯವಾಗಿದ್ದು ಹಲವಾರು ಸಂಗೀತ ಸಂಸ್ಥೆಗಳಲ್ಲಿ ಪ್ರದರ್ಶನಗೊಂಡಿದೆ ಹಾಗೂ ಇವರಿಗೆ ಅಪಾರ ಕೀರ್ತಿ ತಂದಿದೆ.

# ಬೆಳದಿಂಗಳ ಸಂಗೀತ 238

## 17 ಜನವರಿ 2022



**ಗಾಯನ**

**ವಿದುಷಿ ಕಲಾವತಿ ಅವಧೂತ್**

**ವಯೊಲಿನ್**

**ವಿದ್ವಾನ್ ಸುಮಂತ್ ಮಂಜುನಾಥ್**





**ಮೃದಂಗ**

**ವಿದ್ವಾನ್ ತುಮಕೂರು ಬಿ. ರವಿಶಂಕರ್**

ಫೋನ್: 0821–2548221, 2548223 * ಇಮೇಲ್: sutturmath@jssonline.org